# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಸುನೀಲ್ ವಲ್ಯಾಪುರ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **220**

ಉತ್ತರಿಸಬೇಕಾದ ದಿನಾಂಕ : **14.12.2021**

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಎಷ್ಟು ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಅಲ್ಪಾವಧಿ ಕೃಷಿ ಸಾಲ ನೀಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಮೂಲಕ ಶೂನ್ಯ ಬಡ್ಡಿದರದಲ್ಲಿ ವಿತರಿಸಿದ ಅಲ್ಪಾವಧಿ ಕೃಷಿ ಸಾಲದ ತಾಲ್ಲೂಕವಾರು ವಿವರ ಈ ಕೆಳಗಿನಂತಿರುತ್ತದೆ. |

(ರೂ.ಲಕ್ಷಗಳಲ್ಲಿ)

| ಕ್ರ ಸಂ | ತಾಲ್ಲೂಕಿನ ಹೆಸರು | 2018-19 | | 2019-20 | | 2020-21 | | 2021-22 (ನವೆಂಬರ್ 2021ರವರೆಗೆ) | |
|---|---|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಸಂಖ್ಯೆ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಕಲಬುರಗಿ | 7005 | 23.67 | 3012 | 8.13 | 3632 | 11.52 | 7427 | 22.41 |
| 2 | ಅಫಜಲಪೂರ | 10285 | 30.47 | 3687 | 9.69 | 3926 | 13.69 | 9730 | 28.45 |
| 3 | ಆಳಂದ | 12203 | 40.06 | 4308 | 12.38 | 6567 | 25.39 | 13139 | 43.58 |
| 4 | ಜೇವರ್ಗಿ | 17709 | 48.27 | 2521 | 5.07 | 3435 | 10.45 | 6213 | 21.80 |
| 5 | ಚಿತ್ತಾಪೂರ | 3835 | 11.68 | 2844 | 6.37 | 2128 | 6.04 | 6306 | 17.55 |
| 6 | ಚಿಂಚೋಳಿ | 4982 | 13.16 | 940 | 1.35 | 1434 | 4.36 | 8502 | 34.67 |
| 7 | ಸೇಡಂ | 536 | 1.26 | 399 | 0.99 | 382 | 1.29 | 6876 | 37.08 |
| | **ಕಲಬುರಗಿ ಒಟ್ಟು** | **56555** | **168.57** | **17711** | **43.98** | **21504** | **72.74** | **58193** | **205.55** |
| 8 | ಶಹಾಪೂರ | 15014 | 38.33 | 5663 | 15.48 | 9910 | 34.22 | 4430 | 15.58 |
| 9 | ಸುರಪೂರ | 5293 | 20.95 | 3967 | 7.84 | 6456 | 17.05 | 10395 | 33.80 |
| 10 | ಯಾದಗಿರಿ | 6253 | 12.37 | 2782 | 4.58 | 3471 | 7.37 | 3660 | 11.65 |
| | **ಯಾದಗಿರಿ ಒಟ್ಟು** | **30560** | **71.65** | **12412** | **27.90** | **19837** | **58.63** | **18485** | **61.03** |
| | ಒಟ್ಟು ಕ್ರೂಢೀಕೃತ | **87115** | **240.22** | **30123** | **71.87** | **41341** | **131.37** | **76678** | **266.57** |

| | | |
|---|---|---|
| ಆ) | ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನೀಡಿರುವ ಸಾಲದ ಬಡ್ಡಿಯ ಹಣವನ್ನು ಎಷ್ಟು ಬ್ಯಾಂಕುಗಳಿಗೆ ವಿತರಿಸಲಾಗಿದೆ; (ವಿವರ ನೀಡುವುದು) | ಕೇಂದ್ರ ಸರ್ಕಾರದ ಶೇ.2 ರ Interest subvention ಯೋಜನೆಯಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್‌ಗಳು ವಿತರಿಸಿದ ಸಾಲಗಳಿಗೆ ಸಾಲ ವಿತರಣೆ ಆಧಾರವಾಗಿ ಬಡ್ಡಿ ಸಹಾಯಧನ ನೀಡುತ್ತಿದ್ದು, ರಾಜ್ಯದ 21 ಡಿಸಿಸಿ ಬ್ಯಾಂಕುಗಳಿಗೂ ಸಹ 2018-19 ನೇ ಸಾಲಿನಲ್ಲಿ ವಿತರಿಸಿದ ಸಾಲಗಳಿಗೆ ಅನುದಾನವನ್ನು ಈಗಾಗಲೇ ನಬಾರ್ಡ್ ಅಪೆಕ್ಸ್ ಬ್ಯಾಂಕಿನ ಮೂಲಕ ಬಿಡುಗಡೆ ಮಾಡಲಾಗಿದೆ. 2019-20 ನೇ ಸಾಲಿನಲ್ಲಿ ವಿತರಿಸಿದ ಸಾಲಗಳಿಗೆ ನಬಾರ್ಡ್ ಗೆ ಅಪೆಕ್ಸ್ ಬ್ಯಾಂಕ್ ಬೇಡಿಕೆ ಸಲ್ಲಿಸಿದ್ದು, 21 ಡಿಸಿಸಿ ಬ್ಯಾಂಕುಗಳಿಗೂ ಸಹ ಅನುದಾನ ಬಿಡುಗಡೆ ಮಾಡಲು ಬಾಕಿ ಇರುತ್ತದೆ. 2020-21 ನೇ ಸಾಲಿಗೆ ವಿತರಿಸಿದ ಸಾಲಗಳಿಗೆ 21 ಡಿಸಿಸಿ ಬ್ಯಾಂಕುಗಳಿಂದ ಬಡ್ಡಿ ಬಿಲ್ಲುಗಳನ್ನು ಪಡೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>ಕೇಂದ್ರ ಸರ್ಕಾರದ ಅವಧಿಯೊಳಗೆ ಸಾಲ ಮರುಪಾವತಿಸಿದ ರೈತರಿಗೆ ಶೇ.3 ರ ಬಡ್ಡಿ ಪ್ರೋತ್ಸಾಹಧನ ನೀಡುವ ಯೋಜನೆಯಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್‌ಗಳಿಗೆ ಸಾಲ ವಸೂಲಾತಿ ಆಧಾರವಾಗಿ ಬಡ್ಡಿ ಸಹಾಯಧನ ನೀಡುತ್ತಿದ್ದು, ರಾಜ್ಯದ 21 ಡಿಸಿಸಿ ಬ್ಯಾಂಕುಗಳಿಗೂ ಸಹ 2018-19 ನೇ ಸಾಲಿನಲ್ಲಿ ವಸೂಲಾದ ಸಾಲಗಳಿಗೆ ಅನುದಾನವನ್ನು ಈಗಾಗಲೇ ನಬಾರ್ಡ್ ಅಪೆಕ್ಸ್ ಬ್ಯಾಂಕಿನ ಮೂಲಕ ಬಿಡುಗಡೆ ಮಾಡಲಾಗಿದೆ. 2019-20 ನೇ ಸಾಲಿನಲ್ಲಿ ವಸೂಲಾದ ಸಾಲಗಳಿಗೆ ನಬಾರ್ಡ್ ಗೆ ಅಪೆಕ್ಸ್ ಬ್ಯಾಂಕ್ ಬೇಡಿಕೆ ಸಲ್ಲಿಸಿದ್ದು, ಅನುದಾನ ಬಿಡುಗಡೆ ಮಾಡಲು ಬಾಕಿ ಇರುತ್ತದೆ. 2020-21 ನೇ ಸಾಲಿನಲ್ಲಿ ವಸೂಲಾದ ಸಾಲಗಳಿಗೆ ಬಡ್ಡಿ ಬಿಲ್ಲುಗಳನ್ನು ಪಡೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>ರಾಜ್ಯ ಸರ್ಕಾರದ ಅವಧಿಯೊಳಗೆ ವಸೂಲಾದ ಸಾಲಗಳಿಗೆ ರೈತರ ಪರವಾಗಿ ಡಿಸಿಸಿ ಬ್ಯಾಂಕುಗಳಿಗೆ ಬಡ್ಡಿ ಸಹಾಯಧನ ನೀಡುವ ಯೋಜನೆಯಲ್ಲಿ 2020-21 ನೇ ಸಾಲಿನ ಡಿಸೆಂಬರ್‌ವರೆಗೆ ವಸೂಲಾದ ಸಾಲಗಳಿಗೆ ಪೂರ್ಣ ಪ್ರಮಾಣದ ಬಡ್ಡಿ ಸಹಾಯಧನವನ್ನು 21 ಡಿಸಿಸಿ ಬ್ಯಾಂಕುಗಳಿಗೂ ಸಹ ಬಿಡುಗಡೆ ಮಾಡಲಾಗಿದೆ. ಪ.ಜಾತಿ ಮತ್ತು ಪ.ಪಂಗಡದ ಸದಸ್ಯರಿಗೆ ಸಂಬಂಧಿಸಿದಂತೆ ಜೂನ್ 2021 ರ ವರೆಗೆ ವಸೂಲಾದ ಸಾಲಗಳಿಗೆ ಪೂರ್ಣ ಪ್ರಮಾಣದಲ್ಲಿ ಮತ್ತು ಸಾಮಾನ್ಯ ಸದಸ್ಯರಿಗೆ ಸಂಬಂಧಿಸಿದಂತೆ ಮಾರ್ಚ್ 2021 ರಲ್ಲಿ ವಸೂಲಾದ ಸಾಲಗಳಿಗೆ ಶೇ.17 ರಷ್ಟು ಪ್ರಮಾಣದ ಬಡ್ಡಿ ಸಹಾಯಧನವನ್ನು ಸಂಬಂಧಿಸಿದ ಡಿಸಿಸಿ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗಿದೆ. |

| | | |
|---|---|---|
| ಇ) | ಇನ್ನು ಅನೇಕ ಸಣ್ಣ ರೈತರುಗಳು ಶೂನ್ಯ ಬಡ್ಡಿ ದರದಲ್ಲಿ ಸಾಲ ಪಡೆಯುವಲ್ಲಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಲ್ಲ ರೈತರಿಗೂ ಶೂನ್ಯ ಬಡ್ಡಿ ದರದಲ್ಲಿ ಸಾಲ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ? | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>2021-22 ನೇ ಸಾಲಿನಲ್ಲಿ ರಾಜ್ಯದಲ್ಲಿ ಸಹಕಾರ ಸಂಘಗಳ ಮೂಲಕ 30,25,788 ರೈತರಿಗೆ ರೂ.19,370.00 ಕೋಟಿ ಅಲ್ಪಾವಧಿ ಬೆಳೆ ಸಾಲ ವಿತರಿಸುವ ಗುರಿ ಹೊಂದಲಾಗಿದ್ದು, ಇದರಲ್ಲಿ ಅಂದಾಜು 4,58,788 ಹೊಸ ರೈತರಿಗೆ ಸಾಲ ವಿತರಿಸಲು ಉದ್ದೇಶಿಸಲಾಗಿದೆ. ನಬಾರ್ಡ್ ಪುನರ್ಧನ ಮತ್ತು ಡಿಸಿಸಿ ಬ್ಯಾಂಕುಗಳ ಬಂಡವಾಳವನ್ನು ಆಧರಿಸಿ ಹಂತ ಹಂತವಾಗಿ ಎಲ್ಲಾ ಅರ್ಹ ರೈತ ಸದಸ್ಯರಿಗೂ ಬೆಳೆ ಸಾಲ ವಿತರಿಸಲು ಕ್ರಮ ವಹಿಸಲಾಗುವುದು.<br><br>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗೆ 1,33,333 ರೈತರಿಗೆ ರೂ.400 ಕೋಟಿಗಳ ಅಲ್ಪಾವಧಿ ಬೆಳೆ ಸಾಲ ವಿತರಿಸುವ ಗುರಿ ಹೊಂದಲಾಗಿದ್ದು, ದಿ:30-11-2021 ರ ವರೆಗೆ 1,34,779 ರೈತರು ಸಾಲವನ್ನು ಪಡೆದು ಹೊರಬಾಕಿ ಹೊಂದಿರುತ್ತಾರೆ. ಈ ಪೈಕಿ 58,598 ರೈತರಿಗೆ ಹೊಸದಾಗಿ ಸಾಲ ವಿತರಿಸಲಾಗಿದೆ. |

**ಸಂಖ್ಯೆ: ಸಿಒ 360 ಸಿಎಲ್ಎಸ್ 2021**

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು